# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 286/2018 ಸಿಡಬ್ಲೂ : 16 ಪಿಡಬ್ಲೂಃ 13

ಪ್ರಮಾಣವಚನ ಬೋಧಿಸಲಾಯಿತು ದಿಃ 18-05-2026

ಹೆಸರು : ಮಹದೇವ

ತಂದೆ ಹೆಸರು : ಜಂಬಯ್ಯ ಪಂಚಮುಖಿ

ವಯಸ್ಸು : 46 ವರ್ಷ

ಉದ್ಯೋಗ : ಪಿ ಐ ಜೆಸ್ಕಾಂ ರಾಯಚೂರು

ವಾಸಸ್ಥಳ : ರಾಯಚೂರು

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 15-03-2018 ರಿಂದ 28-06-2018 ವರೆಗೂ ಸೇಡಂವೃತ್ತ ನೀರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವಧಿಯಲ್ಲಿ ನಾನು ದಿಃ 22-03-2018 ರಂದು ಚಾ ಸಾ 15 ರವರಿಂದ ಸದರಿ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಬಸವೇಶ್ವರ ಆಸ್ಪತ್ರೆ ಕಲಬುರಗಿ ಶವಗಾರಕ್ಕೆ ಭೇಟಿ ನೀಡಿ ಮೃತ ಖಾಲಿದ್ ಸೈಪುಲ್ಲಾ ಇವರ ಶವ ಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮದಲ್ಲಿ ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 09-00 ರಿಂದ 10-00 ಗಂಟೆಯ ವರೆಗೆ ಜರುಗಿಸಲಾಯಿತು. ಸಾಕ್ಷಿಯ ಸದರಿ ಪಂಚನಾಮೆಯನ್ನು ಈಗ ನೋಡಿ ಗುರುಸಿದ್ದು ಅದನ್ನು ಈಗಾಗಲೇ ನಿ ಪಿ 8 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ ಪಿ 8(ಎ ಮತ್ತು ಬಿ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿಯು ಶವ ಪಂಚನಾಮೆಯ ಕಾಲಕ್ಕೆ ತೆಗೆದಿರುವ ಎರಡು ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 14 ಮತ್ತು 15 ಎಂದು ಗುರುತಿಸಲಾಯಿತು. ನಂತರ ಚಾ ಸಾ 6 ರಿಂದ 11 ಮತ್ತು ನೂರುಪಾಷಾ ರವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾ ಸಾ 1 ರವರು ತೋರಿಸಿದಂತೆ ಚಾ ಸಾ 4 ಮತ್ತು 5 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗ ನೋಡಿ ಗುರುಸಿದ್ದು ಅದನ್ನು ಈಗಾಗಲೇ ನಿ ಪಿ 3 ಎಂದು ಗುರುತಿಸಲಾಗಿದೆ

ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ ಪಿ 3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ಕಾಲಕ್ಕೆ ತೆಗೆದಿರುವ ಭಾವ ಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದೆ.

ದಿ.23-03-2018 ರಂದು ಚಾ ಸಾ 1 ರವರ ಮರು ಹೇಳಿಕೆಯನ್ನು ದಾಖಲಿಸಿರುತ್ತೇನೆ. ದಿ.31-03-2018 ರಂದು ಅಪಘಾತಕ್ಕೆ ಒಳಗಾದ ವಾಹನದ ಆರ್ ಟಿ ಓ ನೀರೀಕ್ಷಣೆ ಮಾಡಿ ವಾಹನದ ಮಾಲೀಕರಾದ ಮಹಮ್ಮದ್ ಉಸ್ಮಾನ್ ರವರಿಂದ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಸದರಿ ಸದರಿ ಮುಚ್ಚಳಿಕೆ ಪತ್ರವನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 16 ಎಂದು ಗುರುತಿಸಲಾಯಿತು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತಕ್ಕೆ ಒಳಗಾದ ಮೊಟಾರು ಸೈಕಲ್ ನೇದ್ದರ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 17 ಮತ್ತು 18 ಎಂದು ಗುರುತಿಸಲಾಯಿತು. ದಿ.07-04-2018 ರಂದು ವೃತನ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿಯುಸ ದರಿ ವರಿದಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 12 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರು ಸಾಕ್ಷಿಯ ಸಹಿಯನ್ನು ನಿ ಪಿ 12(ಎ) ಎಂದು ಗುರುತಿಸಲಾಯಿತು. ಅದೇ ದಿನ ಅಪಘಾತಕ್ಕೆ ಒಳಗಾದ ವಾಹನ ನಿರೀಕ್ಷಣಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ಈಗಾಲೇ ನಿ ಪಿ 11 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 11(ಬಿ) ಎಂದು ಗುರುತಿಸಲಾಯಿತು. ನಂತರ ದಿ.13-04-2018 ರಂದು ಆರೋಪಿ ಖುದ್ದಾಗಿ ಠಾಣೆಗೆ ಹಾಜರಾಗಿದ್ದರಿಂದ ದಸ್ತಗಿರಿ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನುಡಿ ಗುರುತಿಸಿರುತ್ತಾರೆ. ದಿ.13-05-2018 ರಂದು ಸರ್ಕಾರಿ ಆಸ್ಪತ್ರೆ ಸೇಡಂ ದಿಂದ ಆರೋಪಿತನಾದ ಮೊಹಮ್ಮದ್ ಫರಾಷ್ ಅಹಮ್ಮದ್ ಇವರು ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿಕಲುಪಿಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ 19 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ ಪಿ 19(ಎ) ಎಂದು ಗುರುತಿಸಲಾಯಿತು. ತನಿಖೆ ಮುಗಿದರಿಂದ ಮಾನ್ಯ ನ್ಯಾಯಲಕ್ಕೆ ಅಂತಿಮ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ನಾನು ದಿಃ 22-03-2018 ರಂದು ಚಾ ಸಾ 15 ರವರಿಂದ ಸದರಿ ಪ್ರಕರಣದ ಕಡತವನ್ನು ಸ್ವೀಕರಿಸಿಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ದಿನ ಬಸವೇಶ್ವರ ಆಸ್ಪತ್ರೆ ಕಲಬುರಗಿ ಶವಗಾರಕ್ಕೆ ಭೇಟಿ ನೀಡಿ ಮೃತ ಖಾಲಿದ್ ಸೈಪುಲ್ಲಾ ಇವರ ಶವ ಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮದಲ್ಲಿ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 09-00 ರಿಂದ 10-00 ಗಂಟೆಯ ವರೆಗೆ ಜರುಗಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 6 ರಿಂದ 11 ಮತ್ತು ನೂರುಪಾಷಾ ರವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾ ಸಾ 1 ರವರು ತೋರಿಸಿದಂತೆ ಚಾ ಸಾ 4 ಮತ್ತು 5 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ದಿ.23-03-2018 ರಂದು ಚಾ ಸಾ 1 ರವರ ಮರು ಹೇಳಿಕೆಯನ್ನು ದಾಖಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.31-03-2018 ರಂದು ಅಪಘಾತಕ್ಕೆ ಒಳಗಾದ ವಾಹನದ ಆರ್ ಟಿ ಓ ನೀರೀಕ್ಷಣೆ ಮಾಡಿ ವಾಹನದ ಮಾಲೀಕರಾದ ಮಹಮ್ಮದ್ ಉಸ್ಮಾನ್ ರವರಿಂದ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.07-04-2018 ರಂದು ವೃತನ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ದಿನ ಅಪಘಾತಕ್ಕೆ ಒಳಗಾದ ವಾಹನ ನಿರೀಕ್ಷಣಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ದಿ.13-04-2018 ರಂದು ಆರೋಪಿ ಖುದ್ದಾಗಿ ಠಾಣೆಗೆ ಹಾಜರಾಗಿದ್ದರಿಂದ ದಸ್ತಗಿರಿ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.13-05-2018 ರಂದು ಸರ್ಕಾರಿ ಆಸ್ಪತ್ರೆ ಸೇಡಂ ದಿಂದ ಆರೋಪಿತನಾದ ಮೊಹಮ್ಮದ್ ಫರಾಷ್ ಅಹಮ್ಮದ್ ಇವರು ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿಕಲುಪಿಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಿಲ್ಲ. ತನಿಖೆ ಮುಗಿದರಿಂದ ಮಾನ್ಯ ನ್ಯಾಯಲಕ್ಕೆ ಅಂತಿಮ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**